MANUVIKASA
Success Stories

# ಪುಟ್ಟ ಕೃಷಿ ಹೊಂಡ; ನಿಶ್ಚಿತ ಹಾಗೂ ನಿರಂತರ ಆದಾಯ

***ಸಾರಾಂಶ:*** *ಕಾಡಿನ ನಡುವೆ ಇರುವ ಇವರ ಜಮೀನಿಗೆ ಪುಟ್ಟ ಕೃಷಿ ಹೊಂಡ ಬಂದ ನಂತರ ಆದ ಬದಲಾವಣೆಗಳು ಅಪಾರ. ಮುಖ್ಯವಾಗಿ ಬೇಸಿಗೆಯಲ್ಲಿ ನೀರಿನ ಕೊರತೆ ತಪ್ಪಿತು. ತೋಟಗಳಿಗೆ ಅನುಕೂಲವಾಯಿತು. ಕೆಲವೊಮ್ಮೆ ಬೇಸಿಗೆಯಲ್ಲೂ ಭತ್ತ ಬೆಳೆಯುವ ಅವಕಾಶ. ಅಲ್ಲದೆ ಕೇಶವ ಅವರ ಗೃಹ ಉದ್ದಿಮೆಗೆ ಆಸರೆಯಾಯಿತು.*

ಅರೇಹಳ್ಳ ಗ್ರಾಮದ ಕೇಶವ ಅವರು 4ನೇ ತರಗತಿ ಓದಿದ್ದಾರೆ. ಇಬ್ಬರು ತಂಗಿಯರು. ಜಮೀನಿನಲ್ಲಿ ಅಡಿಕೆ, ತೆಂಗು, ಭತ್ತ ಹಾಗೂ ಬಾಳೆ ಮುಖ್ಯ ಬೆಳೆಗಳು. ಇವರ ಗ್ರಾಮದಲ್ಲಿ ನಾಲ್ಕು ಮನೆಗಳು ಮಾತ್ರ. ಎಲ್ಲವೂ ಚಿಕ್ಕಪ್ಪ–ದೊಡ್ಡಪ್ಪಂದಿರ ಮನೆಗಳೇ. ಗ್ರಾಮದಲ್ಲಿ ಕುಡಿಯುವ ನೀರಿಗಾಗಿ ಎರಡು ಬಾವಿಗಳಿವೆ. ಅದಕ್ಕೆ ಒರತೆ ನೀರೇ ಆಧಾರ. ಸುತ್ತ–ಮುತ್ತ ಕಾಡು ಇರುವುದರಿಂದ ನೀರಿನ ಕೊರತೆ ಅಷ್ಟಾಗಿ ಇಲ್ಲ. ಆದರೆ ಮಳೆ ಕಡಿಮೆಯಾದ ವರ್ಷ ಬೇಸಿಗೆಯಲ್ಲಿ ಹಲವು ತಿಂಗಳು ನೀರಿನ ಕೊರತೆ ಎದುರಿಸಿದ ಉದಾಹರಣೆಗಳಿವೆ. ಅಂತಹ ವರ್ಷಗಳಲ್ಲೆಲ್ಲಾ ಮಳೆಗಾಲದಲ್ಲಿ ಮಾತ್ರ ಭತ್ತ ಬೆಳೆಯಲು ಸಾಧ್ಯವಾಗುತ್ತಿತ್ತು. ಕೊಳವೆ ಬಾವಿ ತೆಗೆಸಲು ಇಲ್ಲಿ ಅವಕಾಶವಿಲ್ಲ.



2015–16ರಲ್ಲಿ ಕೇಶವ ಅವರಿಗೆ ಮನು ವಿಕಾಸ ಸಂಸ್ಥೆಯ ಪರಿಚಯವಾಯಿತು. ಕೇಶವ ಅವರ ಒಬ್ಬ ತಂಗಿಯು ತನ್ನ ಗಂಡನ ಊರಿನಲ್ಲಿ ಮನು ವಿಕಾಸ ಸಂಸ್ಥೆಯ ಮಹಿಳಾ ಸಂಘದಲ್ಲಿ ಸದಸ್ಯರಾಗಿದ್ದಾರೆ. ಆ ಸಮಯದಲ್ಲಿ ಸಂಸ್ಥೆಯು ನೀರಿನ ಕೊರತೆಯುಳ್ಳ ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ಕೃಷಿ ಹೊಂಡ ನಿರ್ಮಿಸಿಕೊಡುವ ಯೋಜನೆಯನ್ನು

ಅನುಷ್ಠಾನಗೊಳಿಸುತ್ತಿತ್ತು. ಇದನ್ನು ಗಮನಿಸಿದ್ದ ಆಕೆ ತನ್ನ ಅಣ್ಣನ ಮನೆಯಲ್ಲಿ ನೀರಿಗಾಗಿ ತುಂಬಾ ತಾಪತ್ರಯಪಡುತ್ತಿದ್ದು, ಸಹಾಯ ಮಾಡಬೇಕಾಗಿ ವಿನಂತಿಸಿಕೊಂಡಳು. ಆಗ ಸಂಸ್ಥೆಯ ಸಿಬ್ಬಂದಿಗಳು ಕೇಶವ ಅವರ ಮನೆಗೆ ಭೇಟಿ ನೀಡಿ ಅವರ ಅಗತ್ಯಗಳನ್ನು ಪರಿಶೀಲಿಸಿ ಕೃಷಿ ಹೊಂಡದ ಫಲಾನುಭವಿಯಾಗಿ ಆಯ್ಕೆ ಮಾಡಿಕೊಂಡರು.

ಅದೇ ವರ್ಷ ಒಂದು ಕೃಷಿ ಹೊಂಡವನ್ನು ಕೇಶವ ಅವರ ಜಮೀನಿನ ದಕ್ಷಿಣ ಭಾಗದ ಎತ್ತರದ ಸ್ಥಳದಲ್ಲಿ ತೆಗೆಯಲಾಯಿತು. ಆದರೆ ಸ್ಥಳದ ಆಯ್ಕೆಯ ಸಮಸ್ಯೆಯಿಂದಾಗಿ ಆ ಹೊಂಡಕ್ಕೆ ಸರಿಯಾದ ನೀರಿನ ಆಸರೆ ದೊರೆಯಲಿಲ್ಲ. 2017–18ರಲ್ಲಿ ಅಜೀಂ ಪ್ರೇಮ್‌ಜಿ ಫಿಲಾಂತ್ರಫಿಸ್ ಇನಿಶಿಯೇಟಿವ್ (ಎ.ಪಿ.ಪಿ.ಐ) ಯೋಜನೆಯಲ್ಲಿ 150 ರೈತರಿಗೆ ಕೃಷಿ ಹೊಂಡಗಳನ್ನು ತೆಗೆಸಿಕೊಂಡುವ ಯೋಜನೆ ಜಾರಿಯಾದಾಗ ಮತ್ತೊಮ್ಮೆ ಕೇಶವ ಅವರ ಜಮೀನಿನಲ್ಲಿ ಕೃಷಿ ಹೊಂಡ ತೆಗೆಸಲು ತೀರ್ಮಾನಿಸಲಾಯಿತು. ಈ ಬಾರಿ ಮತ್ತೊಮ್ಮೆ ಸ್ಥಳ ಪರಿಶೀಲನೆ ಮಾಡಿ, ನೀರಿನ ಹರಿವಿನ ಜಾಡುಗಳನ್ನು ಗಮನಿಸಿ ಕೇಶವ ಅವರ ಜಮೀನಿನ ಪೂರ್ವ ಭಾಗದ ಎತ್ತರದ ಸ್ಥಳದಲ್ಲಿ ಕೃಷಿ ಹೊಂಡ ತೆಗೆಯಲು ತೀರ್ಮಾನಿಸಿದರು.

ಜೆ.ಸಿ.ಬಿ ಯಂತ್ರದ ಮೂಲಕ ತಲಾ 30 ಅಡಿ ಅಗಲ, ಉದ್ದ ಮತ್ತು ಆಳದ ಕೃಷಿ ಹೊಂಡ ತೆಗೆಸಲಾಯಿತು. ಈ ಬಾರಿ ಸಂಸ್ಥೆಯ ಲೆಕ್ಕಾಚಾರ ಹುಸಿಯಾಗಲಿಲ್ಲ. ಸ್ವಲ್ಪ ಮಳೆಗೇ ಹೊಂಡಕ್ಕೆ ಉತ್ತಮ ಪ್ರಮಾಣದ ನೀರು ಬಂದು ತುಂಬಿಕೊಂಡಿತು. ಕಳೆದ ಐದು ವರ್ಷಗಳಲ್ಲಿ ಯಾವ ವರ್ಷವೂ ಹೊಂಡ ನೀರಿಲ್ಲದೆ ಬತ್ತಿಲ್ಲ. ಕೇಶವ ಅವರ ಕುಟುಂಬಕ್ಕೆ ನೀರಿನ ತಾಪತ್ರಯ ಕೊನೆಗೊಂಡ ಸಂತಸ. ಹೊಂಡದ ಎರಡೂ ಬದಿಗೆ ಇಳಿಜಾರಿಗೆ ಅನುಗುಣವಾಗಿ ಕಾಲುವೆಗಳನ್ನು ಮಾಡಿ ತೋಟ ಹಾಗೂ ಮನೆಗೆ ನೀರು ಹರಿಯುವ ಹಾಗೆ ಮಾಡಿಕೊಂಡಿದ್ದಾರೆ. ಜೊತೆಗೆ ಹೊಂಡಕ್ಕೆ ಪಂಪ್ ಸೆಟ್ ಕೂರಿಸಿದ್ದು ಎತ್ತರದ ಭಾಗದಲ್ಲಿರುವ ಅಡಿಕೆ ತೋಟಕ್ಕೆ ಇಲ್ಲಿಂದಲೇ ನೀರು ಹಾಯಿಸುತ್ತಾರೆ.



ಮೊದಲ ಸಲ ಕೃಷಿ ಹೊಂಡವನ್ನು ಸಂಪೂರ್ಣ ಉಚಿತವಾಗಿ ತೆಗೆಸಲಾಗಿತ್ತು, ಎರಡನೇ ಸಲ ಹೊಂಡ ನಿರ್ಮಾಣಕ್ಕೆ ಒಟ್ಟು 12,000 ರೂ. ವೆಚ್ಚವಾಗಿದ್ದು ಅದರಲ್ಲಿ ರೈತರ ಕೊಡುಗೆಯಾಗಿ 2000 ರೂ. ಗಳನ್ನು ಕೇಶವ ಅವರು ಭರಿಸಿದ್ದಾರೆ.

ಈಗ ಬೇಸಿಗೆಯಲ್ಲಿಯೂ ಭತ್ತದ ಬೆಳೆ ಹಾಕಲು ಸಾಧ್ಯವಾಗುತ್ತಿದ್ದು 10–15 ಚೀಲ ಭತ್ತ ಲಭ್ಯವಾಗುತ್ತಿದೆ. ಐದು ವರ್ಷಗಳ ಹಿಂದೆ ನೀರಿನ ಕೊರತೆಯಾಗಿ ಫಸಲಿಗೆ ಬಂದಿದ್ದ 50ಕ್ಕೂ ಹೆಚ್ಚು ಅಡಿಕೆ ಮರಗಳು ಒಣಗಿಹೋದವು. ಕಷ್ಟಪಟ್ಟು ಉಳಿಸಿಕೊಂಡಿದ್ದ ಇನ್ನಷ್ಟು ಅಡಿಕೆ ಸಸಿಗಳು ಈಗ ಫಸಲಿಗೆ ಬಂದಿದ್ದು ವರ್ಷಕ್ಕೆ ಒಂದು ಕ್ವಿಂಟಾಲ್ ನಷ್ಟು ಇಳುವರಿ ದೊರೆಯುತ್ತಿದೆ. ಮುಂದಿನ ವರ್ಷಗಳಲ್ಲಿ ಅಡಿಕೆ ಇಳುವರಿ ಇನ್ನಷ್ಟು ಹೆಚ್ಚಾಗುವ ನಿರೀಕ್ಷೆ ಇವರದು. ಹಾಗೆಯೇ ಬಾಳೆಯಿಂದಲೂ ಅಲ್ಪ–ಸ್ವಲ್ಪ ಆದಾಯ ದೊರೆಯುತ್ತಿದೆ. ಕೋತಿಗಳ ಕಾಟ ವಿಪರೀತ ಆಗಿದ್ದು ಅವು ತಿಂದು ಉಳಿಸಿದ ಬಾಳೆಯಷ್ಟೇ ಇವರಿಗೆ ದೊರೆಯುವಂತಾಗಿದೆ. "ಮನೆ ಬಳಕೆಗೆ ತೊಂದರೆ ಇಲ್ಲ" ಎನ್ನುತ್ತಾರೆ ಕೇಶವ.



ಕೇವಲ ಕೃಷಿಯನ್ನಷ್ಟೇ ನಂಬಿದರೆ ಮನೆ ನಡೆಸುವುದು ಕಷ್ಟ ಎಂದು ಅರಿತ ಕೇಶವ ಅವರು ಉಪ ಆದಾಯಕ್ಕಾಗಿ ಸಿಮೆಂಟ್ ನಿಂದ ರಿಂಗ್, ಕಂಬ, ಕಿಟಕಿ, ಬಾಗಿಲು ಫ್ರೇಮುಗಳು, ಬೇಲಿಕಂಬಗಳು ಮುಂತಾದ ಗ್ರಾಮೀಣ ಭಾಗದಲ್ಲಿ ಬಳಸಲ್ಪಡುವ ವಸ್ತುಗಳನ್ನು ತಯಾರಿಸುವ ಕಿರು ಉದ್ದಿಮೆ ನಡೆಸುತ್ತಿದ್ದಾರೆ. ಮನೆಯ ಮುಂಭಾಗದ ವಿಶಾಲ ಸ್ಥಳದಲ್ಲಿಯೆ ಇದಕ್ಕೆ ಬೇಕಾದ ಮೂಲ ಸೌಕರ್ಯಗಳನ್ನು ಮಾಡಿಕೊಂಡಿದ್ದಾರೆ. ಈ ಕೆಲಸಕ್ಕೆ ಖಾಯಂ ಆಗಿ 3–4 ಕೆಲಸಗಾರರಿದ್ದಾರೆ. ಈ ಸಿಮೆಂಟ್ ಆಧಾರಿತ ಕೆಲಸಕ್ಕೆ ಹೆಚ್ಚು ನೀರಿನ ಅಗತ್ಯವಿದೆ. ಸಿಮೆಂಟ್, ಜಲ್ಲಿ ಹಾಗೂ ಮರಳಿನ ಮಿಶ್ರಣಕ್ಕೆ ಹಾಗೂ ಅವುಗಳನ್ನು ತಯಾರಿಸಿದ ನಂತರ ನೆನೆ ಹಾಕಲು ಬೇಕಾದ ನೀರನ್ನು ಕೃಷಿ ಹೊಂಡದಿಂದಲೇ ಪಡೆದುಕೊಳ್ಳುತ್ತಿದ್ದಾರೆ. ಈ ಉದ್ದಿಮೆಯಿಂದ ತಿಂಗಳಿಗೆ ಸರಾಸರಿ 10 ಸಾವಿರ ನಿವ್ವಳ ಆದಾಯ ಪಡೆಯುತ್ತಿದ್ದಾರೆ. ವರ್ಷಕ್ಕೆ 1,20,000 ರೂ. ಆದಾಯವು ಇದರಿಂದ ದೊರೆಯುತ್ತಿದೆ. ಈ ವಸ್ತುಗಳಿಗೆ ಸುತ್ತ–ಮುತ್ತಲ ಗ್ರಾಮಗಳಲ್ಲಿ ತುಂಬಾ ಬೇಡಿಕೆ ಇದೆ. ಅದರಲ್ಲಿಯೂ ಬೇಸಿಗೆಯಲ್ಲಿ ಹೆಚ್ಚು ಜನ ಕೊಳ್ಳುತ್ತಾರೆ.

ಕೃಷಿ ಆದಾಯದ ಜೊತೆಗೆ ಇದೊಂದು ಉಪ ಆದಾಯವಾಗಲಿ ಎಂದು ಆರಂಭಿಸಿದರಾದರೂ ಇಂದು ಇದೇ ಇವರ ಕೈ ಹಿಡಿದಿದೆ ಎನ್ನಬಹುದು. ಕೃಷಿಯಲ್ಲಿ ಆದಾಯವು ಅನಿಶ್ಚಿತವಾಗಿದ್ದು, ಈ ಉದ್ದಿಮೆಯಿಂದ ನಿರಂತರ ಆದಾಯ ಬರುತ್ತಿದೆ. ಇದೇ

ಮುಖ್ಯ ಆದಾಯ ಎಂಬಂತಾಗಿದೆ. ಕೃಷಿ ಹೊಂಡ ನಿರ್ಮಾಣದಿಂದಾಗಿ ನೀರಿನ ಸರಬರಾಜು ನಿರಂತರವಾಗಿದೆ. ಅಲ್ಲದೆ ಬೇಸಿಗೆಯಲ್ಲಿ ಸಿಮೆಂಟ್ ವಸ್ತುಗಳಿಗೆ ಬೇಡಿಕೆ ಹೆಚ್ಚಾಗಿದ್ದು ಆಗ ನೀರಿನ ಕೊರತೆಯಾದರೆ ಸಿಮೆಂಟ್ ವಸ್ತುಗಳನ್ನು ತಯಾರಿಸಲು ಅಸಾಧ್ಯ. ಆದಾಯಕ್ಕೆ ಖೋತಾ. ಆದರೆ ಹೊಂಡ ಇರುವುದರಿಂದ ಸಮಸ್ಯೆ ಬಗೆ ಹರಿದಿದೆ.

ಕೃಷಿ ಕೆಲಸವನ್ನು ಮನೆಯವರೇ ನೋಡಿಕೊಳ್ಳುತ್ತಾರೆ. ಅಂದರೆ ಕೇಶವ ಅವರ ತಂದೆ ಹಾಗೂ ಮಡದಿ ಕೃಷಿ ಕೆಲಸಗಳಿಗೆ ಕೈಜೋಡಿಸುತ್ತಾರೆ. ಮೂರು ಜನ ಮಕ್ಕಳಿದ್ದು ಶಾಲೆ ಕಲಿಯುತ್ತಿದ್ದಾರೆ. ಬಿಡುವಾದಾಗ ಅವರೂ ಸಹ ಕೃಷಿಗೆ ಸಹಕರಿಸುವುದುಂಟು.

**"**ಒಂದು ಸಲ ಹೊಂಡ ವಿಫಲವಾದರೂ ಮತ್ತೆ ಬಂದು ಇನ್ನೊಂದು ಹೊಂಡ ತೆಗೆಸಿ ನಮ್ಮ ಸಮಸ್ಯೆ ಬಗೆಹರಿಸಿದ್ದು ಮನು ವಿಕಾಸ ಸಂಸ್ಥೆಯ ದೊಡ್ಡತನ, ಅವರಿಗೆ ನಾನು ಯಾವತ್ತೂ ಋಣಿ**"** ಎನ್ನುತ್ತಾರೆ ಕೇಶವ.

ಮನು ವಿಕಾಸ ಇತರೆ ಸಂಸ್ಥೆಗಳಿಗಿಂತ ವಿಶಿಷ್ಟವಾಗಿ ನಿಲ್ಲುವುದು ಈ ಕಾರಣಕ್ಕಾಗಿಯೇ. ಸಮಸ್ಯೆಯ ಮೂಲವನ್ನು ಅರ್ಥ ಮಾಡಿಕೊಂಡು ಅದನ್ನು ಬಗೆಹರಿಸಲು ಪ್ರಯತ್ನಿಸುವುದೇ ಇದರ ಹೆಚ್ಚುಗಾರಿಕೆ. ಈ ರೀತಿ ಕಾರ್ಯತಂತ್ರ ರೂಪಿಸದಿದ್ದರೆ ಕೇಶವ ಅವರ ನೀರಿನ ಸಮಸ್ಯೆಗೆ ಪರಿಹಾರ ದೊರಕುವುದು ಅಸಾಧ್ಯವಾಗಿತ್ತು. ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ ಒಂದು ಪ್ರಯೋಜನ ನೀಡಿದ ನಂತರ ಅದು ಸಫಲವಾಗಲಿ ಅಥವಾ ವಿಫಲವಾಗಲೀ ಆತನ ಕೋಟಾ ಮುಗಿಯಿತು ಎಂದು ಸುಮ್ಮನಾಗುತ್ತಾರೆ. ಸರ್ಕಾರದ ಯೋಜನೆ ಇರಲಿ ಅಥವಾ ಇತರೆ ಸ್ವಯಂ ಸೇವಾ ಸಂಸ್ಥೆಗಳಿರಲಿ, ಇದೇ ತತ್ವವನ್ನು ಅನುಸರಿಸುತ್ತಾರೆ. ಅದರೆ ಹಾಗೆ ಮಾಡಿದಾಗ ರೈತರ ಅಥವಾ ಫಲಾನುಭವಿಯ ಸಮಸ್ಯೆ ಹಾಗೇ ಉಳಿಯುತ್ತದೆ. ಕೇವಲ ಲೆಕ್ಕಕ್ಕೆ ಮಾತ್ರ ಕೆಲಸ ಆಯಿತು ಎಂಬಂತಾಗುತ್ತದೆ. ಹಣ ವೆಚ್ಚವಾಗಿರುತ್ತದಾದರೂ ಇದರಿಂದ ಯಾವ ಉಪಯೋಗವೂ ಇಲ್ಲ.

ಈ ಅಂಶವನ್ನು ಗಮನದಲ್ಲಿಟ್ಟುಕೊಂಡಿರುವ ಮನು ವಿಕಾಸ ಸಂಸ್ಥೆಯು ಫಲಾನುಭವಿಯ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸುವತ್ತ ಯಾವತ್ತೂ ಗಮನಹರಿಸುತ್ತದೆ. ಅದೇ ಸಂಸ್ಥೆಯ ಮೂಲ ಮಂತ್ರ. ಆ ಮಾರ್ಗ ಅನುಸರಿಸಿದ್ದರಿಂದಾಗಿಯೇ ಕೇಶವ ಹಾಗೂ ಅಂತಹ ನೂರಾರು ರೈತರ ಸಮಸ್ಯೆ ಬಗೆ ಹರಿದು ಅವರ ಜೀವನಮಟ್ಟ ಸುಧಾರಣೆಯಾಗಿರುವುದನ್ನು ಕಾಣಬಹುದು.

**ವಿಳಾಸ:**
ಕೇಶವ ನಾರಾಯಣ ನಾಯಕ್
ಅರೆಹಳ್ಳ, ಮುಂಡಿಗೆಮಟ್ಟಿ
ಸಿದ್ದಾಪುರ ತಾಲ್ಲೂಕು
ಉ.ಕ. ಜಿಲ್ಲೆ